ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ

*ಸಂಗ್ರಹಿಸಿಟ್ಟ ವಿಷವೊಂದು ಔಟ್‌ಡೇಟೆಡ್ ಆದರೆ ವಿಷ ಕಡಿಮೆಯಾಗುತ್ತಾ, ಭೀಕರ ವಿಷವಾಗುತ್ತಾ, ವಿಷರಹಿತವಾಗುತ್ತಾ?*




ವಾತಾವರಣದಲ್ಲಿ ಬದಲಾವಣೆ ಇಲ್ಲದಿದ್ದರೆ ಎಷ್ಟೇ ವರ್ಷಗಳಾದರೂ ಅತ್ತೆ ಅತ್ತೆಯೇ, ಬಾಸ್ ಬಾಸೇ, ವಿಷ ವಿಷವೇ!

ಎಸ್.ಎ. ಮೋಹನರಾಜು, ಶಿವಮೊಗ್ಗ

*ವಸಂತಮಾಸ ಶೃಂಗಾರಮಾಸವಾದರೆ ಆಷಾಢಮಾಸ...?*

ವಿರಹಮಾಸ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಸಾಕಿದ ಗಿಣಿ ಹದ್ದಾಗಿ ಕುಕ್ಕುವುದಂತೆ; ನಿಜವೆ ರಾಮ್?*

ಹದ್ದು ಮೀರಿದಾಗ ಮಾತ್ರ!

ಎಸ್.ಶ್ರೀಧರ್, ಬೆಂಗಳೂರು

*ಸಂಬಂಧಗಳು ಮುರಿದಾಗ ಏಕೆ ಮನಸ್ಸಿಗೆ ನೋವಾಗುತ್ತದೆ?*



ಮನಸ್ಸು ಸಂಬಂಧಗಳನ್ನು ಹೆಣೆಯುವ ದಾರ; ಸಂಬಂಧ ಮುರಿದಾಗ ಮನಸ್ಸೂ ಮುರಿಯುವುದರಿಂದ ನೋವು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ತಾಯಿ ತ್ಯಾಗಮಯಿಯಾದರೆ ತಂದೆ?*

ಅವಳು ತ್ಯಾಗಮಯಿ ಆಗುವಂತಹ ಪರಿಸ್ಥಿತಿಯನ್ನು ಉಂಟುಮಾಡುವವ!

ಬಿ.ಚಂದ್ರೇಗೌಡ, ಬೆಂಗಳೂರು

*ಸಂಸಾರವನ್ನು ಸಾಗರಕ್ಕೆ ಯಾಕೆ ಹೋಲಿಸುತ್ತಾರೆ?*

ಎರಡೂ ದೂರದಿಂದ ನೋಡಕ್ಕೆ ಚೆನ್ನ, ಮುಟ್ಟಿಕೊಂಡರೆ ಅಂಟಂಟು, ಸವಿದರೆ ಉಗೀಬೇಕೂನ್ಸತ್ತೆ, ಆಗಾಗ್ಗೆ ಸುನಾಮಿ!

ಪೇಂಟರ್ ಪಾಪು, ಸಂತೇಮರಹಳ್ಳಿ

*ಜೀವನದಲ್ಲಿ ಅತ್ಯಂತ ಸಂಕಟದ ಸಂಗತಿ ಯಾವುದು?*

ಹೊಸಬಟ್ಟೆ ತೊಟ್ಟಿರುವಾಗ ಬಾಸ್‌ನ ಗಲೀಜು ಮಗುವನ್ನು ಎತ್ತಿಕೊಳ್ಳುವುದು!

ವಿಜಯ್ ನರಹರಿ, ಆಸುಂಡಿ

*ಹುತ್ತದಲ್ಲಿರುವ ಹಾವಿಗೂ, ವಿಧಾನಸೌಧದಲ್ಲಿರುವ ಮಂತ್ರಿಗಳಿಗೂ ಏನು ವ್ಯತ್ಯಾಸ ಗುರು?*

ಹಾವಿನ ವಿಷದಿಂದ ದೇಹ ಹಾಳು, ಮಂತ್ರಿಯ ವಿಷದಿಂದ ದೇಶ ಹಾಳು!

ನರಸಿಂಹ ಎಂ. ಪೈ, ಕಾಸರಕೋಡ

*ಗೋಮಾತೆ, ಭೂಮಾತೆ ಮತ್ತು ಜನ್ಮದಾತೆಯರಲ್ಲಿ ಯಾರು ದೊಡ್ಡವರು?*

ಭೂಮಾತೆಯೇ. ಪಾಪ, ರಾಜಕಾರಣಿಗಳು ಮಕ್ಕಳು ಎಷ್ಟೇ ಅನಾಚಾರ ಮಾಡಿದರೂ ಗುಮ್ಮದೆ, ಬೈಯ್ಯದೆ ಸಹಿಸುತ್ತಾಳೆ.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ತಾಯಿ ಬೇಕಾ? ಹೆಂಡತಿ ಬೇಕಾ? ಎಂಬ ಪ್ರಶ್ನೆಗಳಲ್ಲಿ ಯಾವುದನ್ನು ಆಯ್ಕೆ ಮಾಡಲಿ?*

ಎಲ್ಲರಿಗೂ ಹುಟ್ಟಿದಾಗಲೇ ತಾಯಿ ಇರುತ್ತಾಳೆ, ಹೆಂಡತಿ ಬೇಕು ಎಂದೇ ಹೇಳಿ!

ರಾಂಚಂದ್ರ ಕೊಪ್ಪಲು, ಅರಳಾಪುರ ಅಂಚೆ

*ಅಂದು ಕಾದಿರುವಳು ಶಬರಿ ಶ್ರೀರಾಮ ಬರುವನೆಂದು, ಇಂದು...?*

ಕಾದಿರುವುದು ಡಬರಿ ಪಾರ್ಸಲ್ ತಿಂಡಿ ಬರುವುದೆಂದು!

ಸಾರಂಗ್, ಬೆಂಗಳೂರು

*ಸ್ವಾಮೀಜಿ ಎಂದರೇನು?*

ಸ್ವಾರ್ಥ ಮೀರಿದ ಜೀವಿ! ಅಂತಹವರು ಈಗಿಲ್ಲ.

ಮಹಾವೀರ ಕಾಸರ, ಶಿವಮೊಗ್ಗ

*ಕಾಂಕ್ರೀಟು ನಗರ ಬೆಂಗಳೂರಿನಲ್ಲಿ ಪೂಜಾಗಾಂಧಿಗೆ ಹೊರಲು ಹುಲ್ಲು ಎಲ್ಲಿ ಸಿಕ್ಕಿತು?*

ಮಣ್ಣಿನ ಮಕ್ಕಳ ಮನೆಯಲ್ಲಿ! ಅಲ್ಲಿ ಧಾರಾಳವಾಗಿ ಮಣ್ಣೂ ಇದೆ, ಹುಲ್ಲೂ ಇದೆಯಂತೆ!

## ಬಹುಮಾನಿತ ಪ್ರಶ್ನೆ

ಶಿವಮೊಗ್ಗ ರಮೇಶ್, ಮೈಸೂರು

*ಮಠದ ಪೀಠಕ್ಕೂ, ಮಹಾರಾಜರ ಸಿಂಹಾಸನಕ್ಕೂ ವ್ಯತ್ಯಾಸವೇನು?*

ಮಹಾರಾಜರ ಸಿಂಹಾಸನಕ್ಕೆ ಅಧಿಕೃತವಾದ ಅಂತಃಪುರ ಇರುತ್ತದೆ!

ಕೆ.ಹೊನ್ನಪ್ಪ, ಕ್ಯಾತ್ಸಂದ್ರ

*ಕಂಡಕ್ಟರ್ ಖಾಕಿಗೂ, ಪೊಲೀಸ್ ಖಾಕಿಗೂ ವ್ಯತ್ಯಾಸವೇನು?*

ಒಂದು ಖಾಕಿಗೆ ಫುಟ್‌ಬೋರ್ಡ್‌ನಲ್ಲಿ ಗಿಂಬಳ, ಇನ್ನೊಂದಕ್ಕೆ ಫುಟ್‌ಪಾತ್‌ನಲ್ಲಿ ಗಿಂಬಳ!

ಓಂಕುಮಾರ್ ಬಿ. ಸ್ವಾಮಿ, ಬೀದರ್

*ಕನ್ನಡ ಚಿತ್ರಗಳೇಕೆ ಫ್ಲಾಫ್ ಆಗುತ್ತಿವೆ?*

ಒಳ್ಳೆಯ ಕಥೆಗಳು ಫ್ಲ್ಯಾಷ್ ಆಗುತ್ತಿಲ್ಲವಂತೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಇಲ್ಲೊಬ್ಬಳು ಹುಡುಗಿ ಯಾರೇ ಚಪ್ಪಾಳೆ ಹೊಡೆದರೂ ತಿರುಗಿ ನೋಡುವುದಿಲ್ಲವಲ್ಲಾ?*



ಆಟೋ ಡ್ರೈವರ್‌ನ ಮಗಳಂತೆ; ತಂದೆಯಂತೆಯೇ ಬುದ್ಧಿ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಭಿಕಾರಿಗೂ, ಪುಢಾರಿಗೂ ಏನು ವ್ಯತ್ಯಾಸ?*

ಅವನು ಚಿಂದಿ ಉಡುತ್ತಾನೆ, ಇವನು ಚಿಂದಿ ಉಡಾಯಿಸುತ್ತಾನೆ!

ರತ್ನಾ ಅಶೋಕ, ಗೊರವರ

*ಮಲ್ಲಿಗೆ ಹೂವಿಗೂ, ಗುಲಾಬಿ ಹೂವಿಗೂ ಇರುವುದು ವ್ಯತ್ಯಾಸವೋ, ಸಂಬಂಧವೋ?*

ಸಂಬಂಧ ಕೆಡಿಸುವ ವ್ಯತ್ಯಾಸ ಮಲ್ಲಿಗೆ ಮಡದಿಗೆ, ಗುಲಾಬಿ ಪ್ರೇಯಸಿಗೆ!

ಪಿ.ಜೆ. ರಾಘವೇಂದ್ರ, ಮೈಸೂರು

*ಮೂವತ್ತು ದಿನಗಳಲ್ಲಿ ಕನ್ನಡ ಮರೆಯಿರಿ ಅನ್ನೋ ಪುಸ್ತಕ ಬರೆಯುತ್ತಿದ್ದಾರಂತೆ?*

ಪುಸ್ತಕವೇನೂ ಬೇಡ. ಎಫ್.ಎಂ. ರೇಡಿಯೋಗೆ ಕಳುಹಿಸಿ, ಒಂದೇ ವಾರದಲ್ಲಿ ಸಖತ್ ಫಾಸ್ಟ್ ಆಗಿ ಮರೆತುಬಿಡುತ್ತಾರೆ!

■ ರಾಮ್